ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 58 |
| ಮಾನ್ಯ ಸದಸ್ಯರ ಹೆಸರು: | ಶ್ರೀ ಕಾಂತರಾಜ್ (ಬಿ.ಎಂ.ಎಲ್)<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | 02.03.2020 |
| ಉತ್ತರಿಸುವ ಸಚಿವರು: | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಸಾರ್ವಜನಿಕರಿಗಾಗಿ ಜಾರಿಯಲ್ಲಿರುವ ಉಚಿತ ಆರೋಗ್ಯ ಯೋಜನೆಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು; | ರಾಜ್ಯದಲ್ಲಿ ಜಾರಿಯಲ್ಲಿರುವ ಉಚಿತ ಆರೋಗ್ಯ ಯೋಜನೆಗಳು ಈ ಕೆಳಗಿನಂತಿವೆ.<br>1. ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆ<br>2. ಅಂಗಾಂಗ ಕಸಿ ಯೋಜನೆ<br>ವಿವರಗಳನ್ನು ಅನುಬಂಧ -1 ರಲ್ಲಿ ಒದಗಿಸಿದೆ. |
| ಆ | ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಉಚಿತ ಆರೋಗ್ಯ ಯೋಜನೆಗಳನ್ನು ರಾಜ್ಯದಲ್ಲೂ ಅಳವಡಿಸಿಕೊಂಡಿದೆಯೇ; | ಹೌದು. |
| ಇ | ಹಾಗಿದ್ದಲ್ಲಿ, ರಾಜ್ಯ/ಕೇಂದ್ರ ಸರ್ಕಾರದ ಉಚಿತ ಆರೋಗ್ಯ ಯೋಜನೆಗಳ ಬಗ್ಗೆ ಸರ್ಕಾರ ಕಾಲ ಕಾಲಕ್ಕೆ ಹೊರಡಿಸಿರುವ ಆದೇಶಗಳು ಯಾವುವು; (ವಿವರ ನೀಡುವುದು) | ಸರ್ಕಾರದ ಅದೇಶ ಸಂಖ್ಯೆ: ಹೆಚ್.ಎಫ್.ಡಬ್ಲ್ಯೂ/69/ಸಿಜಿಇ/2018 ದಿ:15.11.2018 ರಲ್ಲಿ ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯನ್ನು ಜಾರಿಗೊಳಿಸಿದೆ.<br>ಸರ್ಕಾರದ ಆದೇಶ ಸಂಖ್ಯೆ: ಹೆಚ್.ಎಫ್.ಡಬ್ಲ್ಯೂ/64/ಎಫ್‌ಪಿಇ/2018 ದಿನಾಂಕ:03.12.2018 ರಲ್ಲಿ ಬಡವರು/ಬಿಪಿಎಲ್ ರೋಗಿಗಳಿಗೆ ಅಂಗಾಂಗ ಕಸಿ ಯೋಜನೆಯನ್ನು ಜಾರಿಗೊಳಿಸಿದೆ. ಸದರಿ ಯೋಜನೆಯಡಿ ಹೃದಯ, ಕಿಡ್ನಿ, ಯಕೃತ್ತು ಇತ್ಯಾದಿ ಅಂಗಾಂಗಳನ್ನು ಕಸಿ ಮಾಡಲಾಗುತ್ತದೆ. |
| ಈ | ಸಾರ್ವಜನಿಕರಿಗಾಗಿ ಉಚಿತ ಆರೋಗ್ಯ ಯೋಜನೆಗಳನ್ನು ಯಾವ ಮಾನದಂಡವನ್ನು ಅನುಸರಿಸಿ ನೀಡಲಾಗುತ್ತಿದೆ; (ವಿವರಣೆ ನೀಡುವುದು) | ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆ ಸೌಲಭ್ಯ ಪಡೆಯಲು ಪಡಿತರ ಚೀಟಿ ಮತ್ತು ಆಧಾರ್ ಕಾರ್ಡ್‌ಗಳು ಮಾನದಂಡಗಳಾಗಿವೆ.<br>ಅರ್ಹತಾ ರೋಗಿ: ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ, 2013ರಡಿ (ಬಿಪಿಎಲ್) "ಅರ್ಹ ಕುಟುಂಬ"ಕ್ಕೆ ಸೇರಿರುವರು ಹಾಗೂ ಈ ಹಿಂದೆ ಚಾಲ್ತಿಯಲ್ಲಿದ್ದ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯಡಿಯಲ್ಲಿ ನೋಂದಾಯಿತಗೊಂಡಿರುವ ಕುಟುಂಬಗಳಿಗೆ ಒಂದು ವರ್ಷಕ್ಕೆ ಒಂದು ಕುಟುಂಬಕ್ಕೆ ರೂ.5.00 ಲಕ್ಷಗಳವರೆಗೆ ಉಚಿತ ಚಿಕಿತ್ಸೆ ಒದಸಲಾಗುವುದು.<br>ಸಾಮಾನ್ಯ ರೋಗಿ: ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ, 2013ರಡಿ "ಅರ್ಹ ಕುಟುಂಬಕ್ಕೆ" ಸೇರಿಲ್ಲದೇ ಇರುವವರು. ಇವರಿಗೆ ಸರ್ಕಾರಿ ಪ್ಯಾಕೇಜ್ ದರದ 30% ರಷ್ಟು ಇದ್ದು, ಸಹ-ಪಾವತಿಯ ಆಧಾರದ ಮೇಲೆ ಒಂದು ವರ್ಷಕ್ಕೆ ಒಂದು ಕುಟುಂಬಕ್ಕೆ ರೂ.1.50 ಲಕ್ಷ ಇರುತ್ತದೆ. |

Scanned with CamScanner

| | | |
|---|---|---|
| | | <u>ಅಂಗಾಂಗ ಕಸಿ ಯೋಜನೆ:</u> ಕರ್ನಾಟಕ ಸರ್ಕಾರವು ಬಡವರು/ಬಿಪಿಎಲ್ ರೋಗಿಗಳಿಗೆ ಉಚಿತ ಅಂಗಾಂಗ ಕಸಿ ಯೋಜನೆಯನ್ನು ಜಾರಿಗೊಳಿಸಿದೆ. ಬಿಪಿಎಲ್ ರೋಗಿಗಳಿಗೆ ಕಿಡ್ನಿ, ಹೃದಯ ಮತ್ತು ಲಿವರ್ ಅಂಗಾಂಗ ಕಸಿಯನ್ನು ಉಚಿತವಾಗಿ ಮಾಡಲಾಗುವುದು.<br>ಅಂಗಾಂಗ ಕಸಿ ಯೋಜನೆಗೆ ಬಿಪಿಎಲ್ ಕಾರ್ಡ್ ಮತ್ತು ಆಧಾರ್ ಕಾರ್ಡ್‌ಗಳು ಅರ್ಹತಾ ಮಾನದಂಡಗಳಾಗಿವೆ.<br>ಅಂಗಾಂಗ ಕಸಿಗೆ ಲಭ್ಯವಿರುವ ಮೊತ್ತ ಈ ಕೆಳಗಿನಂತಿರುತ್ತದೆ.<br>• ಕಿಡ್ನಿ ಅಂಗಾಂಗ ಕಸಿಗೆ ರೂ.2.00 ಲಕ್ಷ<br>• ಹೃದಯ ಅಂಗಾಂಗ ಕಸಿಗೆ ರೂ. 10.00 ಲಕ್ಷ<br>• ಲಿವರ್ ಅಂಗಾಂಗ ಕಸಿಗೆ ರೂ. 11.00 ಲಕ್ಷ<br>ಇದರ ಜೊತೆಗೆ ಔಷದಿ ವೆಚ್ಚವಾಗಿ ರೂ. 1.00 ಲಕ್ಷಗಳನ್ನು ಒಬ್ಬ ಫಲಾನುಭವಿಗೆ ಒಂದು ವರ್ಷಕ್ಕೆ ನೀಡಲಾಗುತ್ತದೆ. |
| ಉ | ಉಚಿತ ಆರೋಗ್ಯ ಯೋಜನೆಯನ್ನು ಪಡೆದು ಆರೋಗ್ಯ ಕಾರ್ಡ್ ಪಡೆಯಲು ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಬಂದಿದೆ.<br>ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯು ಅಕ್ಟೋಬರ್ 2018 ರಿಂದ ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗುತ್ತಿದೆ. ನೂತನ ಯೋಜನೆ ಯಾಗಿರುವುದರಿಂದ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಮತ್ತು ಆರೋಗ್ಯ ಕಾರ್ಡ್ ವಿತರಿಸಲು ಈಗಾಗಲೇ ವ್ಯಾಪಕ ಕ್ರಮ ಕೈಗೊಳ್ಳಲಾಗಿದ್ದು, ಸಾರ್ವಜನಿಕರಿಗೆ ತೊಂದರೆಯಾಗದಂತೆ ಎಲ್ಲಾ ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ಕರ್ನಾಟಕ ಒನ್, ಬೆಂಗಳೂರು ಒನ್, ಸೇವಾ ಸಿಂಧು ಕೇಂದ್ರಗಳು, ಕಾಮನ್ ಸರ್ವೀಸ್ ಕೇಂದ್ರಗಳು ಹಾಗೂ ಬಾಪೂಜಿ ಸೇವಾ ಕೇಂದ್ರಗಳು ಮುಂತಾದ ಹದಿನೈದು ಸಾವಿರಕ್ಕಿಂತ ಹೆಚ್ಚು ಕೇಂದ್ರಗಳಿಂದ ಕಾರ್ಡ್‌ಗಳನ್ನು ವಿತರಿಸಲು ಕ್ರಮ ವಹಿಸಲಾಗಿದೆ. ಅಲ್ಲದೆ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಶಿಬಿರಗಳನ್ನು ಏರ್ಪಡಿಸಿ ಯೋಜನೆಯ ಬಗ್ಗೆ ಪ್ರಚಾರ ಹಾಗೂ ಕಾರ್ಡ್ ವಿತರಣೆಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವಂತೆ ಕೂಡ ಸಲಹೆ ಮಾರ್ಗಸೂಚಿಗಳನ್ನು ಸುತ್ತೋಲೆ ಮುಖಾಂತರ ನೀಡಲಾಗಿರುತ್ತದೆ.<br>ಮೇಲ್ಕಂಡಂತೆ ಗ್ರಾಮೀಣ ಪ್ರದೇಶ, ಪಟ್ಟಣ, ನಗರ ಹಾಗೂ ಬೃಹತ್ ಬೆಂಗಳೂರನ್ನು ಒಳಗೊಂಡಂತೆ ಎಲ್ಲಾ ಪ್ರದೇಶಗಳಲ್ಲೂ ಕಾರ್ಡ್ ವಿತರಣೆ ಜಾರಿಯಲ್ಲಿರುತ್ತದೆ |

ಆಕುಕ 08 ಎಸ್‌ಬಿವಿ 2020

(ಬಿ. ಶ್ರೀರಾಮುಲು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

Scanned with CamScanner

## ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:58ಕ್ಕೆ ಅನುಬಂಧ-1

### 1. ಸಂಯೋಜಿತ ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆ:

**ವ್ಯಾಪ್ತಿ:**

ರಾಜ್ಯದ ಎಲ್ಲ ನಿವಾಸಿಗಳಿಗೆ ಆರೋಗ್ಯ ಸೇವೆ ಒದಗಿಸುವ ಉದ್ದೇಶದೊಂದಿಗೆ "ಆರೋಗ್ಯ ಕರ್ನಾಟಕ" ಎಂಬ ಸಾರ್ವತ್ರಿಕ ಆರೋಗ್ಯ ರಕ್ಷಣಾ ಯೋಜನೆಯನ್ನು ಕರ್ನಾಟಕ ಸರ್ಕಾರವು ದಿನಾಂಕ: 02.03.2018 ರಿಂದ ಅನುಷ್ಠಾನಗೊಳಿಸುತ್ತಿತ್ತು. ನಂತರದಲ್ಲಿ ಭಾರತ ಸರ್ಕಾರವು "ಆಯುಷ್ಮಾನ್ ಭಾರತ್" ಯೋಜನೆಯನ್ನು ಜಾರಿಗೊಳಿಸಿರುತ್ತದೆ. ಈ ಎರಡೂ ಯೋಜನೆಗಳ ಉದ್ದೇಶ, ವ್ಯಾಪ್ತಿಗಳಲ್ಲಿ ಹೋಲಿಕೆ ಇರುವುದರಿಂದ ಎರಡೂ ಯೋಜನೆಗಳನ್ನು ಒಗ್ಗೂಡಿಸಿ **'ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ'** ಎಂಬ ಸಂಯೋಜಿತ ಯೋಜನೆಯನ್ನು ದಿನಾಂಕ: 30.10.2018 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ.

ಸಂಯೋಜಿತ ಆರೋಗ್ಯ ಯೋಜನೆಯು ಪ್ರಾಥಮಿಕ ಆರೋಗ್ಯ ಆರೈಕೆ, ಸರಳ ದ್ವಿತೀಯ ಆರೋಗ್ಯ ಆರೈಕೆ -291 ಚಿಕಿತ್ಸಾ ವಿಧಾನಗಳು, ಕ್ಲಿಷ್ಟಕರ ದ್ವಿತೀಯ ಆರೋಗ್ಯ ಆರೈಕೆ- 254 ಚಿಕಿತ್ಸಾ ವಿಧಾನಗಳು, ತೃತೀಯ ಆರೋಗ್ಯ ಆರೈಕೆ - 900 ಚಿಕಿತ್ಸಾ ವಿಧಾನಗಳು, ತುರ್ತು ಆರೋಗ್ಯ ಆರೈಕೆಗಳಿಗೆ 169 ಮತ್ತು 36 ಉಪ ಚಿಕಿತ್ಸಾ ವಿಧಾನಗಳು ಸೇರಿ ಒಟ್ಟು 1650 ಚಿಕಿತ್ಸಾ ವಿಧಾನಗಳಿರುತ್ತದೆ.

**ರೋಗಿಗಳ ನೊಂದಣಿ :**

ನಿರ್ದಿಷ್ಟಪಡಿಸಿರುವ ನೋಂದಣಿ ಕೇಂದ್ರಗಳಲ್ಲಿ ರೋಗಿಗಳು ಮೊದಲ ಬಾರಿಗೆ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಚಿಕಿತ್ಸೆಗಾಗಿ ಸಂಪರ್ಕಿಸಿದಾಗ ಅಳವಡಿಸಿರುವ ಐಟಿ ಸಾಫ್ಟ್‌ವೇರ್ ಬಳಸಿಕೊಂಡು ಅವರನ್ನು ಒಂದು ಬಾರಿ ನೋಂದಣಿ ಮಾಡಿಕೊಳ್ಳಬೇಕು. ತುರ್ತು ಸಂದರ್ಭದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಶಿಫಾರಸ್ಸಿನ ಹೊರತಾಗಿ ದಾಖಲಿಸಿಕೊಂಡಿರುವ ಖಾಸಗಿ ಆಸ್ಪತ್ರೆಯನ್ನು ಒಬ್ಬ ರೋಗಿಯು ಸಂಪರ್ಕಿಸಿದಲ್ಲಿ ನಿಯೋಜಿತ ದಾಖಲಾತಿ ಕೇಂದ್ರ ಅಥವಾ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸಲ್ಲಿಸಬಹುದು. ಆ ಸನ್ನಿವೇಶದಲ್ಲಿ ಈ ಒಂದು ಚಿಕಿತ್ಸೆಗಾಗಿ ತಮ್ಮ ಆಧಾರ್ ಕಾರ್ಡ್ ಮತ್ತು ಪಡಿತರ ಚೀಟಿಯನ್ನು ಸಲ್ಲಿಸುವ ಮೂಲಕ ಚಿಕಿತ್ಸೆಯನ್ನು ಪಡೆಯಬಹುದು.

**'ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ'** ಯೋಜನೆಯಡಿಯಲ್ಲಿ ನೋಂದಾಯಿತ ಕಾರ್ಡ್‌ನ್ನು "ಎಬಿ-ಎಆರ್‌ಕೆ" ಕಾರ್ಡ್ ಎಂದು ಕರೆಯಲಾಗುವುದು ಮತ್ತು "ಎಬಿ-ಎಆರ್‌ಕೆ" ಎಂದು ಕರೆಯಲಾಗುವ ಕಾರ್ಡನ್ನು ನೋಂದಣಿ ಸಮಯದಲ್ಲಿ ವಿಶಿಷ್ಟ ಐಡಿ ಸಂಖ್ಯೆಯೊಂದಿಗೆ ನೀಡಲಾಗುವುದು

ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯ ಅಡಿಯಲ್ಲಿ "ಎಬಿ-ಎಆರ್‌ಕೆ" ಕಾರ್ಡ್‌ನ್ನು ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ರೂ.10/- ಶುಲ್ಕದೊಂದಿಗೆ ನೀಡಲಾಗುತ್ತದೆ.

ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾ ಸಿಂಧು ಕೇಂದ್ರಗಳಲ್ಲಿ ರೂ.35/- ಶುಲ್ಕದೊಂದಿಗೆ "ಎಬಿ-ಎಆರ್‌ಕೆ" ಕಾರ್ಡ್ ನೀಡಲಾಗುತ್ತದೆ.

ಸೇವಾ ಸಿಂಧು ಕೇಂದ್ರಗಳಲ್ಲಿ A4 ಹಾಳೆಗೆ ರೂ. 10/- ಪಿ.ವಿ.ಸಿ. ಕಾರ್ಡ್‌ಗೆ ರೂ. 35/- ಶುಲ್ಕದೊಂದಿಗೆ "ಎಬಿ-ಎಆರ್‌ಕೆ" ಕಾರ್ಡ್ ನೀಡಲಾಗುತ್ತದೆ.

ಒಂದು ವೇಳೆ ಈ ಹೆಲ್ತ್ ಕಾರ್ಡ್ ಕಳೆದುಹೋದರೆ ಯಾವುದೇ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಅಥವಾ ನೋಂದಣಿ ಕೇಂದ್ರಗಳಲ್ಲಿ ಆಧಾರ್ ಅಥವಾ ಪಡಿತರ ಚೀಟಿ ಹಾಜರುಪಡಿಸಿ ಆಧಾರ್ ದೃಢೀಕರಣದ ನಂತರ ರೂ.20/- ಪಾವತಿಸಿ ನಕಲು ಹೆಲ್ತ್ ಕಾರ್ಡ್‌ನ್ನು ಪಡೆದುಕೊಳ್ಳುವುದು.

ಆಧಾರ್ ಕಾರ್ಡು ಹೊಂದಿಲ್ಲದ ರೋಗಿಗೆ, ಪಡಿತರ ಚೀಟಿ ಆಧಾರದ ಮೇಲೆ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ನೊಂದಣಿ ಮಾಡಲಾಗುವುದು. ಅಂತಹ ವ್ಯಕ್ತಿಗೆ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಚಿಕಿತ್ಸೆ ಒದಗಿಸಲಾಗುವುದು. ಆದರೆ ಖಾಸಗಿ ಆಸ್ಪತ್ರೆಯಲ್ಲಿ ರೆಫರಲ್ ಮೂಲಕ ಚಿಕಿತ್ಸೆ ಪಡೆಯಲು ಆಧಾರ್ ಅನ್ನು ನೊಂದಣಿ ಮಾಡುವುದು ಅವಶ್ಯವಿರುತ್ತದೆ.

ಯೋಜನೆಯಡಿ ಆರೋಗ್ಯ ಸೇವೆಯ ಸೌಲಭ್ಯಗಳನ್ನು ಪಡೆದುಕೊಳ್ಳುವ ರೋಗಿಗಳನ್ನು ಈ ಕೆಳಗಿನಂತೆ ವಿಂಗಡಿಸತಕ್ಕದ್ದು:

- **ಅರ್ಹತಾ ರೋಗಿ:** ಕರ್ನಾಟಕ ರಾಜ್ಯದ ನಿವಾಸಿಯಾಗಿರುವ ಒಬ್ಬ ರೋಗಿಯು ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ, 2013ರಡಿ "ಅರ್ಹ ಕುಟುಂಬ"ಕ್ಕೆ ಸೇರಿರುವರು; ಈ ವರ್ಗಕ್ಕೆ ಸಾಮಾಜಿಕ-ಆರ್ಥಿಕ ಜಾತಿ ಗಣತಿಯ (SECC) ಡೇಟಾದಲ್ಲಿರುವ ಫಲಾನುಭವಿಗಳು ಮತ್ತು ಈ ಹಿಂದೆ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯ ನೊಂದಾಯಿತ ಫಲಾನುಭವಿಗಳು.
- **ಸಾಮಾನ್ಯ ರೋಗಿ:** ಕರ್ನಾಟಕ ರಾಜ್ಯದ ನಿವಾಸಿಯಾಗಿದ್ದು, ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ, 2013ರಡಿ "ಅರ್ಹ ಕುಟುಂಬ". ವ್ಯಾಖ್ಯಾನದಡಿ ಸೇರಿಲ್ಲದೇ ಇರುವ ಅಥವಾ ಅರ್ಹ ಕುಟುಂಬಕ್ಕೆ ಸೇರಿದ ಕಾರ್ಡ್‌ನ್ನು ಒದಗಿಸದೇ ಇರುವವರು.

**ಸರ್ಕಾರದಿಂದ ಭರಿಸುವ ವೈದ್ಯಕೀಯ ವೆಚ್ಚ:**

1. "ಅರ್ಹತಾ ರೋಗಿ"ಗೆ ನಿಗಧಿತ ಸಾಮಾನ್ಯ ದ್ವಿತೀಯ ಹಂತದ ಆರೋಗ್ಯ ಚಿಕಿತ್ಸೆ, ಸಂಕೀರ್ಣ ದ್ವಿತೀಯ ಹಂತದ ಆರೋಗ್ಯ ಚಿಕಿತ್ಸೆ, ತೃತೀಯ ಹಂತದ ಆರೋಗ್ಯ ಚಿಕಿತ್ಸೆ ಮತ್ತು ತುರ್ತು ಆರೋಗ್ಯ ಚಿಕಿತ್ಸೆಗೆ ವರ್ಷಕ್ಕೆ ರೂ.5.00 ಲಕ್ಷಗಳವರೆಗೆ ಒದಗಿಸಲಾಗುವುದು. ಇದನ್ನು ಪ್ರತಿ ಕುಟುಂಬಕ್ಕೆ ಫ್ಲೋಟರ್ ಆಧಾರದಲ್ಲಿ ಒದಗಿಸಿದ್ದು, ಕುಟುಂಬದ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳು ಸಂಪೂರ್ಣವಾಗಿ ರೂ.5.00 ಲಕ್ಷದ ಮಿತಿಯ ಸೇವೆಯನ್ನು ಪಡೆದುಕೊಳ್ಳಬಹುದು.

2. "ಸಾಮಾನ್ಯ ರೋಗಿ"ಗೆ ಸೇವಾ ಪ್ರಯೋಜನದ ಮಿತಿ ಸರ್ಕಾರಿ ಪ್ಯಾಕೇಜ್ ದರದ 30% ರಷ್ಟು ಇದ್ದು, ಸಹ–ಪಾವತಿಯ ಆಧಾರದ ಮೇಲೆ ಒಟ್ಟಾರೆ ವಾರ್ಷಿಕ ಮಿತಿ ಪ್ರತಿ ಕುಟುಂಬಕ್ಕೆ ರೂ.1.50 ಲಕ್ಷ ಇರುತ್ತದೆ.

**ರೆಫರಲ್ ಇಲ್ಲದ ರೋಗಿ:**

ಅರ್ಹತಾ ರೋಗಿಯಾಗಲಿ ಅಥವಾ ಸಾಮಾನ್ಯ ರೋಗಿಯಾಗಲಿ ಸರ್ಕಾರಿ ಆಸ್ಪತ್ರೆಗಳಿಂದ ರೆಫರ್ ಆಗದೆ ನೇರವಾಗಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಲ್ಲಿ, ಅಂತಹ ಚಿಕಿತ್ಸೆಗೆ ಮರುಪಾವತಿಗೆ ಅವಕಾಶ ಇರುವುದಿಲ್ಲ. ಅಂತಹ ರೋಗಿ ಚಿಕಿತ್ಸೆಯ ಸಂಪೂರ್ಣ ವೆಚ್ಚವನ್ನು ಸ್ವತಃ ಭರಿಸಬೇಕಾಗುತ್ತದೆ.

**ಶಿಫಾರಸ್ಸು ವ್ಯವಸ್ಥೆ (ರೆಫರಲ್):**

1. ನಿಗಧಿತ ಸಂಕೀರ್ಣ ದ್ವಿತೀಯ ಹಂತದ ಆರೋಗ್ಯ ಚಿಕಿತ್ಸೆಯ ಅಗತ್ಯವು ರೋಗಿಗೆ ಇದ್ದಲ್ಲಿ, ಅಥವಾ ನಿಗಧಿತ ತೃತೀಯ ಹಂತದ ಕಾಯಿಲೆಗಳಿಗೆ ಚಿಕಿತ್ಸೆಯ ಅಗತ್ಯವಿದ್ದಲ್ಲಿ, ಸಮೀಪದ ತಾಲ್ಲೂಕು ಅಥವಾ ಜಿಲ್ಲಾ ಮಟ್ಟದ ಸಾರ್ವಜನಿಕ ಆರೋಗ್ಯ ಸಂಸ್ಥೆಯ ವೈದ್ಯರನ್ನು ಮೊದಲು ಸಂಪರ್ಕಿಸಬೇಕು. ಆ ವೈದ್ಯರು ನೀಡುವ ಆರೋಗ್ಯ ಸಲಹೆ, ಚಿಕಿತ್ಸಾ ವಿವರಗಳು ಮತ್ತು ಚಿಕಿತ್ಸಾ ಕ್ಷಮತೆ ಪ್ರಸ್ತುತ ವೈದ್ಯಕೀಯ ಸಾಮರ್ಥ್ಯವನ್ನು ಆಧರಿಸಿ ಅದೇ ಸಾರ್ವಜನಿಕ ಆರೋಗ್ಯ ಸಂಸ್ಥೆಯಲ್ಲಿ ಚಿಕಿತ್ಸೆಯನ್ನು ಕೊಡಬಹುದು ಅಥವಾ ಅದೇ ಜಿಲ್ಲೆಯ ಅಥವಾ ಪಕ್ಕದ ಜಿಲ್ಲೆಯ ಮೇಲಿನ ಸ್ಥರದ ಸಾರ್ವಜನಿಕ ಆರೋಗ್ಯ ಸಂಸ್ಥೆಗೆ ಶಿಫಾರಸ್ಸು ಮಾಡಲಾಗುವುದು. ರೋಗಿಯು ಇಚ್ಛಿಸಿದಲ್ಲಿ, ರಾಜ್ಯದಲ್ಲಿನ ಯಾವುದೇ ಜಿಲ್ಲೆಗಳಲ್ಲಿನ ಶಿಫಾರಸ್ಸುಗೊಂಡ (ರೆಫರಲ್) ರೋಗಿಯು ರಾಜ್ಯದ ರಾಜಧಾನಿಯ ಅತ್ಯುನ್ನತ ಕೇಂದ್ರಗಳಲ್ಲಿ ಅಥವಾ ಹೆಚ್ಚಿನ ಮಟ್ಟದ ಆರೋಗ್ಯ ಕೇಂದ್ರಗಳಲ್ಲಿ ಚಿಕಿತ್ಸೆಯನ್ನು ಪಡೆಯಬಹುದು.
2. ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ರೋಗ ನಿರ್ಣಯ ಮಾಡಲು ಅವಶ್ಯಕವಿರುವ ವೈದ್ಯಕೀಯ ಪರೀಕ್ಷೆ/ಡಯಾಗ್ನೋಸ್ಟಿಕ್ ಸೌಲಭ್ಯಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ರೋಗ ನಿರ್ಣಯ ಪರೀಕ್ಷೆಗಳಿಗಾಗಿ ನೋಂದಾಯಿತ ವೈದ್ಯಕೀಯ ಪರೀಕ್ಷೆ / ಡಯಾಗ್ನೋಸ್ಟಿಕ್ ಪ್ರಯೋಗಾಲಯಗಳಿಗೆ ರೆಫರ್ ಮಾಡಲು ಅವಕಾಶವಿರುತ್ತದೆ.
3. ಒಂದು ವೇಳೆ ಅಗತ್ಯವಿರುವ ಸಂಕೀರ್ಣ ದ್ವಿತೀಯ ಆರೋಗ್ಯ ಆರೈಕೆ ಚಿಕಿತ್ಸೆ ಅಥವಾ ತೃತೀಯ ಹಂತದ ಆರೋಗ್ಯ ಆರೈಕೆ ಚಿಕಿತ್ಸೆಯು ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ದೊರಕದಿದ್ದಲ್ಲಿ, ನೋಂದಾಯಿಸಿಕೊಂಡಿರುವ ಯಾವುದೇ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ರೆಫರ್ ಮಾಡಲಾಗುವುದು.

**ರೋಗಿಗಳ ಸ್ವಾಧೀನ:**

ರೋಗಿಯು ಚಿಕಿತ್ಸೆ ಪಡೆಯಲು ಪ್ರಾಥಮಿಕ ಆರೋಗ್ಯ ಕೇಂದ್ರ ಅಥವಾ ನಿಯೋಜಿತ ಪ್ರಾಧಿಕಾರವನ್ನು ನೋಂದಣಿಗಾಗಿ ನಿಗಧಿಪಡಿಸಿರುವ ಕೇಂದ್ರಗಳಲ್ಲಿ ಒಂದು ಬಾರಿ ಮಾತ್ರ ಸಂಪರ್ಕಿಸಬೇಕು. ಯಾವುದೇ ಅನುಸರಣಾ ಭೇಟಿ ಅಥವಾ ನಂತರದ ಯಾವುದೇ ಚಿಕಿತ್ಸೆಯ ಹೊರರೋಗಿ ವಿಭಾಗದ ಭೇಟಿಗಾಗಿ ಆಧಾರ್ ಪ್ರಮಾಣೀಕರಣದ ಆಧಾರದ ಮೇಲೆ "ಎಬಿ-ಎಆರ್‌ಕೆ" ಕಾರ್ಡ್ ಒದಗಿಸಿದರೆ ಸಾಕಾಗುತ್ತದೆ.

**ಪ್ರಾಥಮಿಕ ಆರೋಗ್ಯ ಆರೈಕೆ ಸೇವೆಗಳು:**

ನಿಗಧಿತಪ್ರಾಥಮಿಕ ಆರೋಗ್ಯ ಆರೈಕೆ ಸೇವೆಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮಾತ್ರವೇ ಒದಗಿಸಲಾಗುವುದು.

**ಸಾಮಾನ್ಯ ದ್ವಿತೀಯ ಆರೋಗ್ಯ ಆರೈಕೆ ಸೇವೆಗಳು:**

ನಿಗಧಿತ ಸಾಮಾನ್ಯ ದ್ವಿತೀಯ ಆರೋಗ್ಯ ಆರೈಕೆ ಸೇವೆಗಳನ್ನು ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಮಾತ್ರವೇ ಒದಗಿಸಲಾಗುವುದು.

**ಕ್ಲಿಷ್ಟಕರ ದ್ವಿತೀಯ ಹಂತದ ಆರೋಗ್ಯ ಆರೈಕೆ ಸೇವೆಗಳು:**

ನಿಗಧಿತ ದ್ವಿತೀಯ ಆರೋಗ್ಯ ಆರೈಕೆ ಸೇವೆಗಳನ್ನು ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಒದಗಿಸಲಾಗುವುದು. ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಸಾಮರ್ಥ್ಯವಿಲ್ಲದಿದ್ದಲ್ಲಿ ರೆಫರಲ್ ಮೂಲಕ ಉನ್ನತ ಸರ್ಕಾರಿ ಆಸ್ಪತ್ರೆಗಳಲ್ಲಿ ಒದಗಿಸಲಾಗುವುದು. ಅಲ್ಲಿಯೂ ಸಾಮರ್ಥ್ಯವಿಲ್ಲದಿದ್ದಲ್ಲಿ ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಒದಗಿಸಲಾಗುವುದು.

**ತೃತೀಯ ಹಂತದ ಆರೋಗ್ಯ ಆರೈಕೆ ಸೇವೆಗಳು:**

ನಿಗಧಿತ ತೃತೀಯ ಹಂತದ ಆರೋಗ್ಯ ಆರೈಕೆ ಸೇವೆಗಳನ್ನು ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಒದಗಿಸಲಾಗುವುದು. ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಸಾಮರ್ಥ್ಯವಿಲ್ಲದಿದ್ದಲ್ಲಿ ರೆಫರಲ್ ಮೂಲಕ ಉನ್ನತ ಸರ್ಕಾರಿ ಆಸ್ಪತ್ರೆಗಳಲ್ಲಿ ಒದಗಿಸಲಾಗುವುದು. ಅಲ್ಲಿಯೂ ಸಾಮರ್ಥ್ಯವಿಲ್ಲದಿದ್ದಲ್ಲಿ ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಒದಗಿಸಲಾಗುವುದು.

**ತುರ್ತು ಸಂದರ್ಭದ ಆರೋಗ್ಯ ಆರೈಕೆ ಸೇವೆಗಳು:**

ತುರ್ತು ಸಮಯದಲ್ಲಿ ಫಲಾನುಭವಿಗಳಿಗೆ (ರೋಗಿಗಳಿಗೆ) ನೋಂದಾಯಿತ ಖಾಸಗಿ ಆಸ್ಪತ್ರೆಯಾಗಲಿ ಯಾವುದೇ ಸರ್ಕಾರಿ ಆಸ್ಪತ್ರೆಯಾಗಲಿ ರೆಫರಲ್ ಇಲ್ಲದೆ ಚಿಕಿತ್ಸೆಯನ್ನು ಪಡೆಯಬಹುದಾಗಿದೆ. ಈ ಕಾಯಿಲೆಗಳನ್ನು ಆರೋಗ್ಯ ಕರ್ನಾಟಕ ಯೋಜನೆಯಡಿ 169 ತುರ್ತು ಚಿಕಿತ್ಸಾ ವಿಧಾನಗಳನ್ನು ಗುರುತಿಸಲಾಗಿದೆ.

2. **ಜ್ಯೋತಿ ಸಂಜೀವಿನಿ ಯೋಜನೆ:**

**ಉದ್ದೇಶ :**

ಗಂಭೀರ ಹಾಗೂ ಮಾರಣಾಂತಿಕ ಕಾಯಿಲೆಗಳಿಗೆ ತುತ್ತಾದ ರಾಜ್ಯ ಸರಕಾರಿ ನೌಕರರು ಮತ್ತು ಅವರ ಕುಟುಂಬದ ಅವಲಂಬಿತ ಸದಸ್ಯರಿಗೆ ಉಚಿತವಾಗಿ ನೊಂದಾಯಿತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ತೃತೀಯ ಹಂತದ (ಖಿಜಡಿಣಚಿಡಿಥಿ ಊಜಚಿಟಣಥ ಅಚಿಡಿಜ) ಆರೋಗ್ಯ ಸೇವೆಯನ್ನು ಒದಗಿಸುತ್ತದೆ.

**ಸ್ಪೆಷಾಲಿಟಿಗಳು :**

ಹೃದ್ರೋಗ, ಕ್ಯಾನ್ಸರ್, ನರರೋಗ, ಮೂತ್ರಪಿಂಡದ ಕಾಯಿಲೆ, ಸುಟ್ಟಗಾಯ, ಗಂಭೀರ ಸ್ವರೂಪದ ಅಪಘಾತ ಮತ್ತು ಚಿಕ್ಕ ಮಕ್ಕಳ ಕಾಯಿಲೆಗಳಿಗೆ ಸಂಬಂಧಿಸಿದ (ವೈದ್ಯಕೀಯ ಕಾನೂನು ಪ್ರಕರಣಗಳನ್ನು ಹೊರತುಪಡಿಸಿ) ಒಟ್ಟು 7 ಬಗೆಯ ಸ್ಪೆಷಾಲಿಟಿಗಳನ್ನು ಇದು ಒಳಗೊಂಡಿರುತ್ತದೆ.

**ಫಲಾನುಭವಿಗಳು ಮತ್ತು ವ್ಯಾಪ್ತಿ :**

ಈ ಯೋಜನೆಯ ಸೌಲಭ್ಯವನ್ನು ಪಡೆಯಲು "ಫಲಾನುಭವಿಗಳು" ರಾಜ್ಯ ಸರಕಾರದ ನೌಕರರಾಗಿರಬೇಕು ಅಥವಾ ಅವರ ಸರಕಾರದ ಸೇವಾ ನಿಯಮಾವಳಿಗಳ ಅಡಿಯಲ್ಲಿ ಬರುವ ಕುಟುಂಬದ ಅವಲಂಬಿತ ಸದಸ್ಯರು ಈ ಯೋಜನೆಯ ವ್ಯಾಪ್ತಿಗೊಳಪಡುತ್ತಾರೆ.

**ಫಲಾನುಭವಿಗಳ ಗುರುತಿಸುವಿಕೆ :**

ಈ ಯೋಜನೆಯ ಸೌಲಭ್ಯವನ್ನು ಪಡೆಯಲು ಫಲಾನುಭವಿಗಳು ರಾಜ್ಯ ಸರಕಾರದ ನೌಕರರಾಗಿರಬೇಕು ಅಥವಾ ಅವರ ಸರಕಾರದ ಸೇವಾ ನಿಯಮಾವಳಿಗಳ ಅಡಿಯಲ್ಲಿ ಬರುವ ಕುಟುಂಬದ ಅವಲಂಬಿತ ಸದಸ್ಯರು ಈ ಯೋಜನೆಯ ವ್ಯಾಪ್ತಿಗೊಳಪಡುತ್ತಾರೆ.ಕರ್ನಾಟಕ ಸರಕಾರದ ವಿಮಾ ಇಲಾಖೆಯ ಪಾಲಿಸಿ ಸಂಖ್ಯೆಯು ಆಡಳಿತ ಮತ್ತು ಸಿಬ್ಬಂದಿ ಸುಧಾರಣಾ ಇಲಾಖೆಯ ಹೆಚ್.ಆರ್.ಎಂ.ಎಸ್. ಡೇಟಾಬೇಸ್‌ನೊಂದಿಗೆ ಸಮನ್ವಯಿತವಾಗಿರಬೇಕು.ಸರಕಾರದ ಸುವರ್ಣ ಆರೋಗ್ಯ ಸುರಕ್ಷಾ

ಟ್ರಸ್ಟ್‌ಗೆ ಸರಕಾರದ ನೌಕರರ ಮತ್ತು ಅವರ ಅವಲಂಬಿತರನ್ನು ಗುರುತಿಸುವ ಅವಕಾಶ ನೀಡಿರುತ್ತದೆ. ನೌಕರನ ಅವಲಂಬಿತ ಕುಟುಂಬ ಸದಸ್ಯನೆಂದರೆ, ನಿಯಮ 2(1)ರ (ಎ) (ಬಿ) ಕರ್ನಾಟಕ ಸರಕಾರದ ನೌಕರರು (ಮೆಡಿಕಲ್ ಅಟೆಂಡೆಂಟ್) ನಿಯಮಗಳು 1963 ಈ ಕೆಳಗೆ ವ್ಯಾಖ್ಯಾನಿಸಿರುವಂತೆ

1) ಸರಕಾರದ ನೌಕರರ ಹೆಂಡತಿ ಅಥವಾ ಗಂಡ
2) ತಂದೆ ಮತ್ತು ತಾಯಿ(ಮಲತಾಯಿಯನ್ನೊಳಗೊಂಡಂತೆ) ಸಾಮಾನ್ಯವಾಗಿ ಸರಕಾರದ ನೌಕರರ ಜೊತೆ ವಾಸವಿದ್ದು ಅವರ ಆದಾಯ ರೂ. 6000/- ಮೀರಿರಬಾರದು
3) ಸರಕಾರದ ನೌಕರನ ಮಕ್ಕಳು, ದತ್ತು ಮಕ್ಕಳು ಮತ್ತು ಮಲ ಮಕ್ಕಳಾಗಿದ್ದು, ಇವರು ಸಂಪೂರ್ಣವಾಗಿ ನೌಕರನಿಗೆ ಅವಲಂಬಿತವಾಗಿರಬೇಕು. ಮೇಲೆ ತಿಳಿಸಿರುವ ಎಲ್ಲಾ ವಿವರಗಳು ಸರಕಾರಿ ನೌಕರನಿಂದ ದೃಢೀಕರಿಸಲ್ಪಟ್ಟಿರಬೇಕು.

**ಅನರ್ಹತೆ :**

ಯಾವುದೇ ನೌಕರನು ಬೇರೆ ಇನ್ನಾವುದೇ ಸರ್ಕಾರಿ ಪ್ರಾಯೋಜಿತ ಯೋಜನೆಯ ಫಲಾನುಭವಿಯಾಗಿದ್ದಲ್ಲಿ ಈ ಯೋಜನೆಯ ಲಾಭ ಪಡೆಯಲು ಅನರ್ಹನಾಗಿರುತ್ತಾನೆ.

**ಯೋಜನೆಯ ವಿನ್ಯಾಸ :**

ಈ ಯೋಜನೆಯು ಅಷ್ಯುರೆನ್ಸ್ ವಿಧಾನದಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಅನುಷ್ಠಾನಗೊಳ್ಳುತ್ತಿದ್ದು, ರಾಜ್ಯ ಸರಕಾರದ ನೌಕರರು ಮತ್ತು ಅವರ ಕುಟುಂಬದ ಅವಲಂಬಿತ ಸದಸ್ಯರಿಗೆ ನೋಂದಾಯಿತ ಆಸ್ಪತ್ರೆಗಳಲ್ಲಿ ನಿಗಧಿತ ಹಣಕಾಸಿನ ಮಿತಿಯಿಲ್ಲದೆ ಚಿಕಿತ್ಸೆ ದೊರೆಯುತ್ತದೆ.ವಾಜಪೇಯಿ ಆರೋಗ್ಯಶ್ರೀ ಯೋಜನೆಯಲ್ಲಿ ಈಗಾಗಲೇ ನೋಂದಾಯಿತವಾದ ಆಸ್ಪತ್ರೆಗಳು ಜ್ಯೋತಿ ಸಂಜೀವಿನಿ ಯೋಜನೆಯಲ್ಲಿಯು ನೋಂದಾವಣೆಯಾಗುತ್ತವೆ. ನೋಂದಾವನಾ ಪ್ರಕ್ರಿಯೆಯು ನಿರಂತರವಾಗಿರುತ್ತದೆ.ಇದೊಂದು ಉಚಿತ ಯೋಜನೆಯಾಗಿದ್ದು, ಇದರಲ್ಲಿ ನಿಗಧಿಪಡಿಸಿದ ವಾರ್ಡ್ ಸೌಲಭ್ಯಕ್ಕಿಂತ ಉನ್ನತ ದರ್ಜೆಯ ವಾರ್ಡ್ ಸೌಲಭ್ಯಗಳನ್ನು ಫಲಾನುಭವಿಯು ಆಯ್ಕೆ ಮಾಡಿಕೊಂಡಲ್ಲಿ ಇದರ ವ್ಯತ್ಯಾಸದ ಮೊತ್ತವನ್ನು ಫಲಾನುಭವಿಯೇ ಭರಿಸಬೇಕಾಗುತ್ತದೆ.

**ಬೆನಿಫಿಟ್ ಪ್ಯಾಕೇಜು :**

ಯೋಜನೆಯು ಹೃದ್ರೋಗ, ಕ್ಯಾನ್ಸರ್, ನರರೋಗ, ಮೂತ್ರಪಿಂಡದ ಕಾಯಿಲೆ, ಸುಟ್ಟಗಾಯ, ಗಂಭೀರ ಸ್ವರೂಪದ ಅಪಘಾತ ಮತ್ತು ಚಿಕ್ಕ ಮಕ್ಕಳ ಕಾಯಿಲೆಗಳಿಗೆ ಸಂಬಂಧಿಸಿದ 642 ಬಗೆಯ ಶಸ್ತ್ರಚಿಕಿತ್ಸೆ/ಚಿಕಿತ್ಸೆಗಳನ್ನು ಒಳಗೊಂಡಿರುತ್ತದೆ.ಇದರಲ್ಲಿ ಸಮಾಲೋಚನೆ, ತಪಾಸಣೆ, ಚಿಕಿತ್ಸಾ ವೆಚ್ಚ, ಆಹಾರ, ಆಸ್ಪತ್ರೆಯ ವೆಚ್ಚ, ಔಷದವನ್ನು ಮತ್ತು ನಂತರದ ಸೇವೆಗಳನ್ನು 10 ದಿನಗಳವರೆಗೆ ಒಳಗೊಂಡಿರುತ್ತದೆ.ಇಂಪ್ಲಾಂಟ್ಸ್, ಸ್ಟೆಂಟ್ಸ್‌ಗಳಿಗೆ ನಿಗಧಿಯಾಗಿರುವ ಗರಿಷ್ಠ ಮಿತಿಯನ್ನು ಮೀರಿದಲ್ಲಿ ವ್ಯತ್ಯಾಸದ ಮೊತ್ತವನ್ನು ಫಲಾನುಭವಿಯು ಭರಿಸಬೇಕಾಗುತ್ತದೆ.ಇದಲ್ಲದೆ 138 ಅನುಸರಣಾ ಚಿಕಿತ್ಸೆಗಳನ್ನು ಯೋಜನೆಯು ಒಳಗೊಂಡಿದ್ದು, ಸಮಾಲೋಚನೆ, ಡಯಾಗ್ನೋಸ್ಟಿಕ್ಸ್ ಮತ್ತು ಔಷಧಗಳನ್ನೊಳಗೊಂಡಿರುತ್ತದೆ.

**ವಾರ್ಡ್‌ಗಳ ಅರ್ಹತೆ**

| ಕ್ರ. ಸಂ | ವೇತನ ಶ್ರೇಣಿ | ಪಡೆಯಲರ್ಹವಾದ ವಾರ್ಡ್‌ಗಳ ದರ್ಜೆ/ ಸೌಲಭ್ಯಗಳು | ದರಗಳು |
|---|---|---|---|
| 1. | ಮಾಸಿಕವಾಗಿ ರೂ. 16,000/- ರವರೆಗೆ | ಸಾಮಾನ್ಯ ವಾರ್ಡ್ | ದರಪಟ್ಟಿಯಂತೆ ಅನ್ವಯ* |
| 2. | ಮಾಸಿಕವಾಗಿ ರೂ. 16,001/-ರಿಂದ ರೂ.43,200/- ರವರೆಗೆ | ಅರೆ ಖಾಸಗಿ ವಾರ್ಡ್ | ಜನರಲ್ ವಾರ್ಡ್ ದರಕ್ಕಿಂತ 10% ಹೆಚ್ಚು |
| 3. | ರೂ. 43,201/- ಮತ್ತು ಮೇಲ್ಪಟ್ಟು | ಖಾಸಗಿ ವಾರ್ಡ್ | ಜನರಲ್ ವಾರ್ಡ್ ದರಕ್ಕಿಂತ 25% ಹೆಚ್ಚು |

**"ಅಂಗಾಂಗ ಕಸಿ ಯೋಜನೆ"**

ಕರ್ನಾಟಕ ರಾಜ್ಯ ಬಡವರು/ಬಿಪಿಎಲ್ ರೋಗಿಗಳಿಗಾಗಿ ಬಿ.ಪಿ.ಎಲ್. ಹಾಗೂ ಆಧಾರ್ ಕಾರ್ಡ್‌ಗಳ ಆಧಾರದ ಮೇಲೆ ತಮ್ಮ ಹತ್ತಿರದ ಸಂಬಂಧಿಯಿಂದ ಅಂಗಾಂಗ ದಾನ ಪಡೆದುಕೊಂಡಾಗ ಅಂತಹ ಅಂಗಾಂಗ ಕಸಿಯನ್ನು ಸಂಬಂಧಿಸಿದ ನೊಂದಾಯಿತ ಆಸ್ಪತ್ರೆಗಳಲ್ಲಿ (ಇನ್ಸ್‌ಟಿಟ್ಯೂಟ್ ಆಫ್ ನೆಫ್ರೋ ಯುರಾಲಜಿ, ಶ್ರೀ.ಜಯದೇವ ಇನ್ಸ್‌ಟಿಟ್ಯೂಟ್ ಆಫ್ ಕಾರ್ಡಿಯೋಲಜಿ, ಪಿ.ಎಂ.ಎಸ್.ಎಸ್.ವೈ, ಇನ್ಸ್‌ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟೆರಾಲಜಿ) ಮಾಡಲಾಗುವುದು.

- ಒಂದೊಮ್ಮೆ ಸರ್ಕಾರಿ ಆಸ್ಪತ್ರೆಯಲ್ಲಿ ಕಸಿ ಶಸ್ತ್ರಚಿಕಿತ್ಸೆ ಮಾಡುವ ಸಾಮರ್ಥ್ಯ ಹೊಂದಿಲ್ಲದಿದ್ದಲ್ಲಿ ನೋಂದಾಯಿತ ಖಾಸಗಿ ಆಸ್ಪತ್ರೆಗೆ ರೆಫರ್ ಮಾಡಲಾಗುವುದು.
- ಮೃತ ಶರೀರ (ಮೆದುಳು ನಿಷ್ಕ್ರೀಯಗೊಂಡ) ಕಸಿ ಪ್ರಕರಣದಲ್ಲಿ ಅಂಗಾಂಗ ಪುನರ್ ಕೇಂದ್ರದಲ್ಲಿ ಸ್ವೀಕರಿಸುವವರ ಮತ್ತು ಲಭ್ಯತೆಯ ನೋಂದಣಿ ಪ್ರಕಾರ ಸರ್ಕಾರಿ ಅಥವಾ ಖಾಸಗಿ ನೋಂದಾಯಿತ ಆಸ್ಪತ್ರೆಗಳಲ್ಲಿ ಅಂಗಾಂಗ ಕಸಿ ಶಸ್ತ್ರ ಚಿಕಿತ್ಸೆಯನ್ನು ನಡೆಸಬಹುದಾಗಿದೆ
- ದಿ:15.08.2019 ರಂದು ನಾರಾಯಣ ಹೃದಯಾಲಯ ಆಸ್ಪತ್ರೆಯಲ್ಲಿ ಸುಮಾರು 39 ವರ್ಷದ ಹಾರ್ಟ್ ಫೆಲ್ಯೂರ್ ಮತ್ತು ಲಿವ್ರೋ ಕಾರ್ಡಿಯಾ ದಿಂದ ಬಳಲುತ್ತಿದ್ದ ಜಮಖಂಡಿ ತಾಲ್ಲೂಕಿನ ಬಾಗಲಕೋಟೆ ನಿವಾಸಿ ಪುರುಷ ರೋಗಿಗೆ ಹೃದಯಕಸಿ ನಡೆಸಿದ್ದು, ರೋಗಿಯು ಆರೋಗ್ಯಕರವಾಗಿ ಇರುವುದು ಕಂಡುಬಂದಿದೆ.
- ಇದು ರಾಜ್ಯ ಸರ್ಕಾರದ ಅಂಗಾಂಗ ಕಸಿಯೋಜನೆಯಡಿಯಲ್ಲಿ ಪ್ರಥಮ ಬಾರಿಗೆ ನೋಂದಾಯಿತ ಖಾಸಗಿ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ.
- ಈವರೆಗೆ ಈ ಯೋಜನೆಯಡಿಯಲ್ಲಿ 5 ಮೂತ್ರಪಿಂಡ ಕಸಿ ಹಾಗೂ 1 ಹೃದಯ ಶಸ್ತ್ರ ಚಿಕಿತ್ಸೆ ಕೈಗೊಳ್ಳಲಾಗಿದೆ.

**ಚಿಕಿತ್ಸಾ ಮೊತ್ತ:**

- ಕಿಡ್ನಿ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಗೆ ರೂ. 2.00 ಲಕ್ಷ + immunosuppression medication ವೆಚ್ಚ ರೂ.1.00 ಲಕ್ಷಗಳನ್ನು ಒಬ್ಬ ಫಲಾನುಭವಿಗೆ ಒಂದು ವರ್ಷಕ್ಕೆ ಒದಗಿಸಲಾಗುತ್ತದೆ.
- ಹೃದಯ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಗೆ ರೂ. 10.00 ಲಕ್ಷ + immunosuppression medication ವೆಚ್ಚ ರೂ.1.00 ಲಕ್ಷಗಳನ್ನು ಒಬ್ಬ ಫಲಾನುಭವಿಗೆ ಒಂದು ವರ್ಷಕ್ಕೆ ಒದಗಿಸಲಾಗುತ್ತದೆ.
- ಲಿವರ್ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಗೆ ರೂ. 11.00 ಲಕ್ಷ + immunosuppression medication ವೆಚ್ಚ ರೂ.1.00 ಲಕ್ಷಗಳನ್ನು ಒಬ್ಬ ಫಲಾನುಭವಿಗೆ ಒಂದು ವರ್ಷಕ್ಕೆ ಒದಗಿಸಲಾಗುತ್ತದೆ.

****